ಚುಕ್ಕಿ. ಇದುವರೆಗೆ ನಾಲ್ಕು ಮದುವೆಗಳಷ್ಟೇ ಇಲ್ಲಿ ನಡೆದಿವೆ. ಮೊದಲ ಮದುವೆ ಬೌದ್ಧಧರ್ಮದ ಅನುಸಾರ ನಡೆದರೆ, ನಂತರದ ಮದುವೆಗಳು ಮಂತ್ರ ಮಾಂಗಲ್ಯ, ವಚನಮಾಂಗಲ್ಯ, ಅಂತರ್ಜಾತಿ ಮಂತ್ರ ಮಾಂಗಲ್ಯ ಅನುಸರಿಸಿವೆ. ಇಲ್ಲಿ ಶಾಸ್ತ್ರ ಸಂಪ್ರದಾಯವನ್ನು ಪಾಲಿಸುವುದಿಲ್ಲ. ನಂಜುಂಡಸ್ವಾಮಿ–ಕುವೆಂಪು ಅವರ ಆದರ್ಶವನ್ನು ಪಾಲಿಸಿ ಸರಳ ಮತ್ತು ಆದರ್ಶ ಮದುವೆಯನ್ನು ಮಾಡಿಸುತ್ತಾರೆ.

ಅಮೃತಭೂಮಿ ಸಂಪರ್ಕ ಸಂಖ್ಯೆ: 8050288801

## ಬುಡಕಟ್ಟಿನಲ್ಲೂ ಬದಲಾವಣೆಯ ಗಾಳಿ

ಚಾಮರಾಜನಗರದ ಆಸುಪಾಸಿನಲ್ಲಿ ಇರುವ ಸೋಲಿಗ ಸಮುದಾಯದಲ್ಲಿ ಮದುವೆಯ ಕ್ರಮವೇ ಭಿನ್ನ. ಕುಲಗಳನ್ನು ನೋಡಿ ಕೇಳಿ ಮದುವೆ ಆಗುವ ಪದ್ಧತಿ ಬುಡಕಟ್ಟು ಸಮುದಾಯದಲ್ಲಿ ಮೊದಲಿಂದಲೂ ಇದೆ. ಅವರದೇ ಆದ ಜಾತ್ರೆ ಹಬ್ಬಗಳ ಸಂಭ್ರಮ ಆಚರಣೆಯಲ್ಲಿ ಹಾಡು–ನೃತ್ಯ ಇದ್ದೇ ಇರುತ್ತದೆ. ಆ ಸಂಭ್ರಮಗಳಲ್ಲಿ ನೆರೆದವರಲ್ಲಿ ಪ್ರಾಯದ ಹೆಣ್ಣು–ಗಂಡು ಇರುತ್ತಾರೆ. ಅವರಲ್ಲಿ ಯಾವುದಾದರೂ ಒಂದು ಜೋಡಿ ಒಲವನ್ನು ಪ್ರಕಟಿಸಿದರೆ, ಆ ಸಂಭ್ರಮದಲ್ಲೇ ಮದುವೆಯ ಶಾಸ್ತ್ರವೂ ಮುಗಿಯುತ್ತದೆ.

'ಇತ್ತೀಚೆಗೆ ಆರ್ಥಿಕ ಸ್ಥಿತಿ ಕೊಂಚ ಸುಧಾರಿಸಿರುವುದರಿಂದ ಕಲ್ಯಾಣ ಮಂಟಪಗಳಲ್ಲಿ ಮದುವೆಯನ್ನು ಮಾಡುತ್ತಿದ್ದೇವೆ' ಎನ್ನುತ್ತಾರೆ ಸಮುದಾಯದ ಗುರುಸ್ವಾಮಿ. ಅವರ ಸಮುದಾಯದಲ್ಲಿ ಮದುವೆಯಾದ ನಂತರ ಹೆಂಡತಿಯನ್ನು ಬಿಡುವಂತಿಲ್ಲ. ಹಾಗೇನಾದರೂ ಬಿಟ್ಟರೆ ಅದಕ್ಕೆ ಸಮುದಾಯ ಶಿಕ್ಷೆಯನ್ನು ನೀಡುತ್ತದೆ. ವಿಧವೆಯನ್ನೂ ಉತ್ಸವದಲ್ಲಿ ಮದುವೆ ಆಗಲು ತಮ್ಮ ಸಮಾಜದಲ್ಲಿ ಅವಕಾಶ ಇದೆ ಎನ್ನುತ್ತಾರೆ ಅವರು.

## ಸರಳ ಎನ್ನುವ ಮೌಲ್ಯ

ಮಂತ್ರ ಮಾಂಗಲ್ಯ, ನೋಂದಣಿ ಮದುವೆ, ಸಾಮೂಹಿಕ ವಿವಾಹ – ಸರಳ ಮದುವೆಯ ಸ್ವರೂಪ ಯಾವುದೇ ಇರಲಿ, ಅದರ ಪರಿಣಾಮ ಕುಟುಂಬದ ಜೊತೆಗೆ ಸಮಾಜದ ಮೇಲೂ ಆಗುತ್ತದೆ. ಸರಳ ಮದುವೆಯಿಂದ ಆಗುವ ಕೆಲವು ಅನುಕೂಲಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು:

1. ಮದುವೆಯನ್ನು ಸರಳವಾಗಿ ಮಾಡುವುದರಿಂದ ಸಾಕಷ್ಟು ಹಣ ಉಳಿಸಬಹುದು. ಇದರಿಂದಾಗಿ ಕುಟುಂಬಗಳು ಹಣಕಾಸಿನ ಮುಗ್ಗಟ್ಟಿಗೆ ಒಳಗಾಗುವುದು ತಪ್ಪುತ್ತದೆ.
2. ಅದ್ದೂರಿತನಕ್ಕೆ ಕಡಿವಾಣ ಹಾಕಿ ಉಳಿಸುವ ಹಣವನ್ನು ನವ ದಂಪತಿಯ ಹೊಸ ಜೀವನಕ್ಕೆ ಅವಶ್ಯವಾದ ವಸ್ತುಗಳನ್ನು ಹೊಂದಿಕೊಳ್ಳಲು ಬಳಸಬಹುದು.
3. ಸರಳವಾಗಿ ಮದುವೆಯಾಗುವುದು ಗಂಡು–ಹೆಣ್ಣಿನ ನಡುವಿನ ನಂಟನ್ನು ಉದಾತ್ತಗೊಳಿಸುವ ಒಂದು ಪ್ರಯತ್ನ. ಮದುವೆಗೆ ಹೆಚ್ಚು ಹಣ ಖರ್ಚು ಮಾಡುವುದು, ದಾಂಪತ್ಯಕ್ಕೆ ವಹಿವಾಟಿನ ಸ್ವರೂಪ ನೀಡುತ್ತದೆ. ಬಹುತೇಕ ಸಂದರ್ಭಗಳಲ್ಲಿ ಮದುವೆಯ ಖರ್ಚನ್ನು ಹೆಣ್ಣಿನ ಪೋಷಕರು ಭರಿಸುವುದರಿಂದ, ಅಂಥ ಮದುವೆ ಗಂಡನ್ನು ಮಾರಾಟದ ವಸ್ತುವನ್ನಾಗಿ ಬಿಂಬಿಸುತ್ತದೆ.
4. ಮದುವೆಗೆ ಮಾಡುವ ಹೆಚ್ಚಿನ ಖರ್ಚು ಪೋಷಕರ ಆತ್ಮಾಭಿಮಾನಕ್ಕೆ ಧಕ್ಕೆ ತರುತ್ತದೆ.

### ಮದುವೆಗೆ ಕಾನೂನು ಮುದ್ರೆ

ಧರ್ಮದ, ಸಂಪ್ರದಾಯದ ಪ್ರಕಾರ ಮದುವೆ ಆಗದಿದ್ದರೆ ಅದನ್ನು ಮದುವೆ ಅಲ್ಲ ಎನ್ನುವುದಾದರೆ ಮದುವೆಯನ್ನು ಕಾನೂನುಬದ್ಧ ಮಾಡುವುದು ಹೇಗೆ? ಬೇರೆ ಧರ್ಮ, ಅಂತರ್ಜಾತಿ ಮದುವೆ ಅಥವಾ ಹಿಂದೂ ಧರ್ಮದ ಆಚರಣೆಯನ್ನು ಬಿಟ್ಟು ಮದುವೆ ಮಾಡಿಕೊಂಡ ಸಂದರ್ಭದಲ್ಲಿ ಉಪನೋಂದಾವಣೆ ಕಚೇರಿಯಲ್ಲಿ ವಿಶೇಷ ಕಾನೂನಿನ (Special Marriage Act) ಪ್ರಕಾರ ವಿವಾಹ ನೋಂದಾವಣೆ ಮಾಡಿಸಿದರೆ, ಅದಕ್ಕೆ ಕಾನೂನು ಮಾನ್ಯತೆ ದೊರೆಯುತ್ತದೆ.

ನೋಂದಾವಣೆ ಇಲಾಖೆಯಲ್ಲಿ ನೇರವಾಗಿ ಮದುವೆ ಮಾಡಿಕೊಳ್ಳಲೂ ಅವಕಾಶ ಇದೆ. ಹಾಗೆ ಮಾಡಿಕೊಳ್ಳಬೇಕು ಅಂದರೆ, ಒಂದು ತಿಂಗಳು ಮೊದಲು ಮದುವೆ ಕೋರಿ ಅರ್ಜಿ ಸಲ್ಲಿಸಬೇಕು. ಆ ಬಗ್ಗೆ ಕಚೇರಿಯ ಸೂಚನಾ ಫಲಕದಲ್ಲಿ ಫೋಟೊ ಸಹಿತ ವಿವರ ಪ್ರಕಟಿಸುತ್ತಾರೆ.

ಸಾರ್ವಜನಿಕ ಪ್ರಕಟಣೆಯಿಂದ ಆಗಬಹುದಾದ ಅಪಾಯದ ಸಾಧ್ಯತೆಯನ್ನು ತಪ್ಪಿಸಲು ದೇವಸ್ಥಾನದಲ್ಲಿ ಹಾರ ಬದಲಾಯಿಸಿ ತಾಳಿ ಕಟ್ಟುವ, ಇಲ್ಲವೇ ಸರಳ ವಿವಾಹದ ವಿಭಿನ್ನ ಮಾದರಿಗಳ ಮೂಲಕ ಮದುವೆಯಾದ ಸಂದರ್ಭದ ಫೋಟೊವನ್ನು ನೋಂದಾವಣೆ ಇಲಾಖೆಗೆ ಸಲ್ಲಿಸಿ, ವಿಶೇಷ ಕಾನೂನಿನ ಅನುಸಾರ ಮದುವೆಯನ್ನು ನೋಂದಣಿ ಮಾಡಿಸುವ ಅವಕಾಶವೂ ಇದೆ.



ಮಂತ್ರ ಮಾಂಗಲ್ಯಕ್ಕೆ ಯಕ್ಷಗಾನದ ಸ್ಪರ್ಶ: ಯಕ್ಷ ಮಂತ್ರ ಮಾಂಗಲ್ಯ



ಚಾಮರಾಜನಗರ ತಾಲ್ಲೂಕಿನ ಆಲೂರು ಗ್ರಾಮದಲ್ಲಿ ನಡೆದ 'ವಚನ ಮಾಂಗಲ್ಯ' ವಿವಾಹ